# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2027 |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಉತ್ತರಿಸಬೇಕಾದ ಸಚಿವರ ಹೆಸರು | ಸಾರಿಗೆ ಮತ್ತು ಮುಜರಾಯಿ ಸಚಿವರು |

*********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನ ಹಳ್ಳಿ, ಪೆದ್ದನ ಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕಾಡು ಮಾರನ ಹಳ್ಳಿಯ 1198.34 ಎಕರೆ ಜಾಗವನ್ನು 11/13ನೇ ಏಪ್ರಿಲ್ 1939ರಂದು ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಶ್ರೀಮತಿ ದ್ವಾರಕಬಾಯಿ ವೇದಾಂತಂರವರು ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಜಾಗವನ್ನು ಯಾವ ಕಾರಣಕ್ಕಾಗಿ ದಾನವಾಗಿ ನೀಡಲಾಗಿದೆ; ಪ್ರಸ್ತುತ ಎಷ್ಟು ಎಕರೆ ಜಾಗ ದೇವಾಲಯದ ಹೆಸರಿನಲ್ಲಿದೆ; ಅನಧಿಕೃತವಾಗಿ ಒತ್ತುವರಿಯಾದ ಜಾಗವೆಷ್ಟು; (ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಜಾಗದಿಂದ ಬಂದ ಆದಾಯದಲ್ಲಿ ಬಂದ 1/3 ಭಾಗವನ್ನು ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯದಲ್ಲಿ ತುಲಾ ಮಾಸದಲ್ಲಿ ನಡೆಯುವ ಪೂಜಾ ಕೈಂಕರ್ಯಗಳ ಸಂದರ್ಭದಲ್ಲಿ ಆಗಮಿಸುವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಗಾಗಿ ಉಪಯೋಗಿಸತಕ್ಕದೆಂದು ಹಾಗೂ 2/3 ಹಣವನ್ನು ವೈದ್ಯಕೀಯ ಶಿಕ್ಷಣ ಪಡೆಯುವ ಮಹಿಳಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಉದ್ದೇಶಕ್ಕಾಗಿ ದಾನವಾಗಿ ನೀಡಲಾಗಿದೆ.<br><br>ಪ್ರಸ್ತುತ 155 ಎಕರೆ 22ಗುಂಟೆ ವಿಸ್ತೀರ್ಣದ ಜಾಗ ಶ್ರೀರಂಗಪಟ್ಟಣ, ಶ್ರೀ ರಂಗನಾಥ ಸ್ವಾಮಿ ದೇವರ ಹೆಸರಿನಲ್ಲಿದೆ. 23 ಜನ ಒತ್ತುವರಿದಾರರು ಒಟ್ಟು 37 ಎಕರೆ-12.08 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ.<br><br>ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಆ) | ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಾಗವನ್ನು ಸರ್ಕಾರ ಯಾವ ಆದೇಶದ ಅನ್ವಯ 79 ನಿರಾಶ್ರಿತರಿಗೆ ತಲಾ 2.2 ಎಕರೆ ಜಮೀನು ಮಂಜೂರು ಮಾಡಿದೆ. ಈ ಜಮೀನನ್ನು ಸರ್ಕಾರಕ್ಕೆ ದಾನವಾಗಿ ನೀಡಲಾಗಿತ್ತೇ; ಸರ್ಕಾರಕ್ಕೆ ದಾನ ನೀಡಿಲ್ಲವೆಂದಾಗ ಸರ್ಕಾರ ಹೇಗೆ ದೇವಸ್ಥಾನದ ಜಾಗವನ್ನು ಹಂಚಲು ಕ್ರಮಕೈಗೊಂಡಿದೆ; ದೇವಸ್ಥಾನಕ್ಕೆ ದಾನ ನೀಡಿದ ಜಮೀನನ್ನು ಸ್ವಾಧೀನ ಪಡಿಸಿ ಇತರರಿಗೆ ಹಂಚುವಾಗ ದೇವಸ್ಥಾನಕ್ಕೆ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಿದೆ.(ವಿವರ ನೀಡುವುದು) | ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದ ಸಂಖ್ಯೆ:ಆರ್.ಡಿ 238 ಎಲ್.ಜಿ.ಬಿ 79 ದಿನಾಂಕ:25/06/1982 ರ ಆದೇಶದಂತೆ ತಹಶೀಲ್ದಾರ್ ಮಾಗಡಿ ತಾಲ್ಲೂಕುರವರ ಅಧಿಕೃತ ಜ್ಞಾಪನ ಪತ್ರದ ಆದೇಶದ ಸಂಖ್ಯೆ:ಎಲ್.ಎನ್.ಡಿ/ಸಿಆರ್/53/82-83 ದಿನಾಂಕ: 13/07/1982 ರಂತೆ ಮತ್ತು ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಎಲ್.ಎನ್.ಡಿ /ಎಸ್ಆರ್/466/1986-87 ದಿನಾಂಕ:27/05/1989 ರಂತೆ ಮಂಚನ ಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ 79 ನಿರಾಶ್ರಿತರಿಗೆ ಚೋಳನಾಯಕನ ಹಳ್ಳಿ ಗ್ರಾಮದ ಸ.ನಂ 57 ರಿಂದ 63 ರವರೆಗೆ ತಲಾ 2-20 ಎಕರೆ/ಗುಂಟೆಯಂತೆ ಬದಲಿ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.<br><br>ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದಂತೆ ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಬದಲಿ ಜಮೀನನ್ನು ನೀಡುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1964 ರಡಿ ಮಂಜೂರು ಮಾಡಲಾಗಿರುತ್ತದೆ ಹಾಗೂ ಇನಾಂ ಅಬಾಲಿಷನ್ ಕಾಯ್ದೆ /ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ಕಾಯ್ದೆಗಳನ್ವಯ ಮಂಜೂರು ಮಾಡಲಾಗಿರುತ್ತದೆ. ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡು ನಿರಾಶ್ರಿತರಿಗೆ ಜಮೀನು ಮಂಜೂರಾಗಿರುವ ಕುರಿತು ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಸಲಾದ ಸಮಿತಿಯ ಸಭೆಯಲ್ಲಿ ನಿರಾಶ್ರಿತರಿಗೆ ಮಂಜೂರಾಗಿರುವ ಆದೇಶಗಳನ್ನು ಕ್ರೋಢೀಕರಿಸಿ ಪೂರ್ಣ ವಿವರಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಪರ ಜಿಲ್ಲಾಧಿಕಾರಿಗಳು ಮತ್ತು ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚನೆ ನೀಡಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ 13 ಜನರ ಸಮಿತಿಯು 11.11.2021 ರಿಂದ ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ; ಎಷ್ಟು ಅನಧಿಕೃತ ಒತ್ತುವರಿದಾರರನ್ನು ಗುರುತಿಸಿದೆ? (ವಿವರ ನೀಡುವುದು) | ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ 13 ಜನರ ಸಮಿತಿಯು ಕಾಲಕಾಲಕ್ಕೆ ದಿನಾಂಕ:11-11-2021, 18-11-2021, 13-03-2024 16-05-2024, 10-06-2024, 21-06-2024, 31-07-2024, 01-10-2024, 31-12-2024 15-01-2025, 17-02-2025, 16-04-2025, 10-07-2025, ಹಾಗೂ ದಿನಾಂಕ:05-08-2025 ಹೀಗೆ ಒಟ್ಟು 14 ಸಭೆಗಳನ್ನು ನಡೆಸಲಾಗಿರುತ್ತದೆ.<br><br>ಚೋಳನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 56 ರಿಂದ 63ರ ವರೆಗಿನ ಜಮೀನುಗಳನ್ನು TOTAL STATION SURVEY ನಡೆಸಿ ನಕ್ಷೆಯಲ್ಲಿ ಖಾತೆದಾರರು ಅನುಭವದಲ್ಲಿರುವಂತೆ ಗುರುತಿಸಿದ್ದು, ಒತ್ತುವರಿ ಮಾಡಿರುವ ಜಮೀನಿನ 38.07 ಎಕರೆ/ಗುಂಟೆ ಖರಾಬು 0-34.08 ಎಕರೆ/ಗುಂಟೆ ಉಳಿಕೆ 37-12.08 ಎಕರೆ/ ಗುಂಟೆ ಆಗಿದ್ದು, ಒಟ್ಟು 23 ಜನ ಒತ್ತುವರಿದಾರರನ್ನು ಗುರುತಿಸಲಾಗಿದೆ. ಒತ್ತುವರಿದಾರರ ವಿವರವನ್ನು **ಅನುಬಂಧ- 01ರಲ್ಲಿ** ಒದಗಿಸಿದೆ.<br><br>ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕುರುಬರಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ಒತ್ತುವರಿಯಾಗಿರುವ ಬಗ್ಗೆ ಕರ್ನಾಟಕ ಭೂಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ 44/16-17, 46/16-17, 47/16-17 45/16-17, 15/16-17ರಂತೆ ಸ್ವಯಂ ಪ್ರೇರಿತ ಪ್ರಕರಣಗಳು ದಾಖಲಾಗಿರುತ್ತದೆ. ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹ ರಿಟ್ ಅರ್ಜಿ ಸಂಖ್ಯೆ:13564/2019ರಂತೆ ಪ್ರಕರಣ ದಾಖಲಾಗಿರುವುದರಿಂದ ಮಾನ್ಯ ಘನ ನ್ಯಾಯಾಲಯದ ಆದೇಶದಂತೆ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಕಂಇ 96 ಮುಸಪ್ರ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

## ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿ ರವರ ಕಾರ್ಯಾಲಯ, ಬೆಂಗಳೂರು ದಕ್ಷಿಣ ತಾಲ್ಲೂಕು, ನೆಲ ಮಹಡಿ, ಕಂದಾಯ ಭವನ, ಕೆ.ಜಿ ರಸ್ತೆ, ಬೆಂಗಳೂರು-560009

ಸೋಳನಾಯಕನಹಳ್ಳಿ ಗ್ರಾಮದ ಸ.ನಂ 56 ರಿಂದ 63 ರವರೆಗಿನ ಜಮೀನುಗಳಿದ್ದು, ಈ ಪೈಕಿ ಅನಧಿಕೃತ ಒತ್ತುವರಿದಾರರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸ | ಸ. ನಂ | ಬ್ಲಾಕ್. ನಂ | ಜಂಟಿ ಅಳತೆಯಂತೆ ಅನುಭವದಾರರ ಹೆಸರು/ಒತ್ತುವರಿದಾರರು | ಎ/ಗುಂ | ಖರಾಬು | ಬಾಕಿ ಎ/ಗುಂ |
|---|---|---|---|---|---|---|
| 1 | 56 | 02 | ರನ್ನಮ್ಮ ಕೋಂ ನಾಗರಾಜು, ರತ್ನಮ್ಮ ಕೋಂ ಸೂರ್ಯನಾರಾಯಣ | 2-13 | 2-13 | 2-13 |
| 2 | 56 | 03 | ವೀರಪ್ಪ ಬಿನ್ ಮಾದಯ್ಯ | 0-30 | 0-30 | 0-30 |
| 3 | 56 | 04 | ಜಯಮ್ಮ ಕೋಂ ನಾಗರಾಜಯ್ಯ | 2-09 | 2-09 | 2-09 |
| 4 | 56 | 05 | ನಾಗಯ್ಯ ಬಿನ್ ಸಿದ್ದಯ್ಯ | 1-29 | 1-29 | 1-29 |
| 5 | 56 | 060 | ಪುಟ್ಟಮ್ಮ | 1-11 | 1-11 | 1-11 |
| 6 | 56 | 07 | ವೆಂಕಟಪ್ಪ | 1-06 | 1-06 | 1-06 |
| 7 | 56 | 08 | ಹನುಮಂತರಾಜು ಬಿನ್ ಬೈಲಪ್ಪ | 3-08 | 3-08 | 3-08 |
| 8 | 56 | 09 | ನರಸಿಂಹಮೂರ್ತಿ ಬಿನ್ ವೆಂಕಟರಮಣ | 2-31 | 2-31 | 2-21 |
| 9 | 56 | 10 | ತಿಮ್ಮಯ್ಯ ಬಿನ್ ವೆಂಕಟರಮಣಯ್ಯ | 2-09 | 2-09 | 2-00 |
| 10 | 56 | 11 | ಹೊನ್ನಯ್ಯ ಬಿನ್ ಲೇ ತಿಮ್ಮರಾಯಪ್ಪ | 2-09 | 2-09 | 2-09 |
| 11 | 56 | 12 | ವೆಂಕಟರಂಗಯ್ಯ ಬಿನ್ ವೆಂಕಟರಾಮಯ್ಯ | 0-24 | 0-24 | 0-24 |
| 12 | 56 | 13 | ವರಲಕ್ಷ್ಮೀ ಬಿನ್ ರಾಮಯ್ಯ | 0-24 | 0-24 | 0-24 |
| 13 | 56 | 14 | ಸರಸಮ್ಮ ಕೋಂ ನಂಜಪ್ಪ | 0-24 | 0-24 | 0-24 |
| 14 | 56 | 15 | ರಾಜು ಬಿನ್ ನಂಜಪ್ಪ | 0-11 | 0-11 | 0-11 |
| 15 | 56 | 16 | ನಾರಾಯಣ ಬಿನ್ ನರಸಿಂಹಯ್ಯ | 0-05 | 0-05 | 0-05 |
| 16 | 59 | 15 | ಶಂಕರ್ | 2-20 | 2-20 | 2-20 |
| 17 | 59 | 04 | ಲಕ್ಷ್ಮೀನರಸಿಂಹಯ್ಯ ಬಿನ್ ಲೇ ತಿಮ್ಮಪ್ಪ | 2-20 | 2-20 | 2-20 |
| 18 | 62 | 01 | ದೊಡ್ಡಕೆಂಪಯ್ಯ ಬಿನ್ ವೆಂಕಟಯ್ಯ | 2-04 | 2-04 | 2-1-04 |
| 19 | 62 | 04 | ಮಾರಯ್ಯ ಬಿನ್ ಸಿದ್ದಯ್ಯ | 2-20 | 2-20 | 2-16-04 |
| 20 | 63 | 06 | ಕರಿಯಪ್ಪ | 2-20 | 2-20 | 2-20 |
| 21 | 63 | 09 | ಪುಟ್ಟಮ್ಮ | 0-30 | 0-30 | 0-30 |
| 22 | 63 | 10 | ವೆಂಕಟರಮಣ | 0-30 | 0-30 | 0-30 |
| 23 | 63 | ಖಾತೆದಾರರು | ರಂಗನಾಥ್ ಸಂಪ್ತನ್ ಬಿನ್ ಸಂಪಂತ್ ಕುಮಾರ್ | 2-20 | 2-20 | 2-20 |
| | | | 23 ಒತ್ತುವರಿದಾರರ ಒಟ್ಟು ವಿಸ್ತೀರ್ಣ | 38-07 | 0-34.08 | 37-12.08 |

Tahsildar
Bangalore South
Bangalore

Scanned with OKEN Scanner